


ಅವಳು ಪೆಟ್ರೋಗಾರ್ಡ್‌ನ ಅತ್ಯುತ್ತಮ ಶಾಲೆಯೊಂದರಲ್ಲಿ ಶ್ರೀಮಂತ ಹೆಣ್ಣುಮಕ್ಕಳಿಗೆ ಕಲಿಸುತ್ತಿದ್ದಳು. ತುಂಬಾ ವರ್ಷಗಳ ಕಾಲ ನಾವು ಬಹಳ ಸ್ನೇಹದಿಂದ ಒಟ್ಟಿಗೆ ಬಾಳುತ್ತಿದ್ದೆವು. ಅದೇನೋ ಅವಳು ಒಂಥರಾ ಹೊಟ್ಟೆಕಿಚ್ಚಿನ ಸ್ವಭಾವದವಳಾಗಿದ್ದಳು. ನನ್ನ ದುರದೃಷ್ಟವೇನೋ, ನನ್ನನ್ನವಳು ಬಹಳ ತೀವ್ರವಾದ ಮೋಹದಿಂದ ಪ್ರೀತಿಸುತ್ತಿದ್ದಳು.'

ನನಗೆ ಆತನೊಂದಿಗೆ ಮುಖ ಕೊಟ್ಟು ಮಾತಾಡಲು ಕಷ್ಟವಾಗುತ್ತಿತ್ತು. ನಾನು ಈವರೆಗೆ ನೋಡಿದ ವ್ಯಕ್ತಿಗಳಲ್ಲೆಲ್ಲಾ ಆತ ಅತ್ಯಂತ ಕುರೂಪಿಯಾದ ವ್ಯಕ್ತಿಯಾಗಿದ್ದನು. ಆದರೆ, ಕೆಲವು ಸಲ ಆ ಆರೋಗ್ಯವಂತನಾದ ಕೆಂಪು ಕೆಂಪಾದ ಮತ್ತು ಖುಷಿ ಖುಷಿಯ ಮನುಷ್ಯನಲ್ಲಿ ಏನೋ ಮೋಡಿಯ ಆಕರ್ಷಣೆ ಹುಟ್ಟುತ್ತಿತ್ತು. ಆದರೆ, ಅವನ ಸ್ಥೂಲಶರೀರ ಮಾತ್ರ ಅಸಹ್ಯವಾಗಿತ್ತು.

'ನಾನು ಅವಳಿಗೆ ನಿಷ್ಠನಾಗಿದ್ದೆ ಎಂದು ನಟನೆ ಮಾಡಲ್ಲ. ನಾನು ಅವಳನ್ನು ಮದುವೆಯಾದಾಗ ಅವಳೇನೂ ಸಣ್ಣಪ್ರಾಯದವಳಾಗಿರಲಿಲ್ಲ. ನಾವು ಮದುವೆಯಾಗಿ ಹತ್ತು ವರ್ಷವಾಗಿತ್ತು. ಅವಳು ಸಣ್ಣಗೆ, ತೆಳ್ಳಗಿದ್ದಳು, ಅವಳ ಮೈಬಣ್ಣ ಚೆನ್ನಾಗಿರಲಿಲ್ಲ. ಅವಳು ಬಹಳ ಕಟುವಾಗಿ ಮಾತಾಡುತ್ತಿದ್ದಳು. ಅವಳು ನನ್ನನ್ನೂ ಸೇರಿದಂತೆ ಎಲ್ಲವೂ ತನ್ನ ಒಡೆತನಕ್ಕೆ ಸೇರಿದ್ದು ಎಂಬಂತೆ ಬಹಳ ರೋಷದಿಂದಲೇ ನಡೆದುಕೊಳ್ಳುತ್ತಿದ್ದಳು. ಅವಳನ್ನು ಬಿಟ್ಟು ಬೇರೆ ಯಾರೆಡೆಗೂ ನಾನು ಆಕರ್ಷಿತನಾಗುವುದನ್ನು